**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 51/2023**

**ಸಾಕ್ಷಿಗೆ ದಿನಾಂಕ 25.3.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಂಗಳಮ್ಮ | ಪಿ.ಡಬ್ಲ್ಯೂ–1 |
| ತಂದೆಯ/ಗಂಡನ ಹೆಸರು | : | ಶಿವರಾಜು | ಸಿ.ಡಬ್ಲ್ಯೂ–1 |
| ವಯಸ್ಸು | : | 42 | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಹಾದನೂರು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಹಾಗುಾ ಇತರ ಆರೋಪಿತರ ಪರಿಚಯವಿರುತ್ತದೆ. ಚಾಸ 2 ನನ್ನ ಗಂಡ, ಚಾಸ 3 ನನ್ನ ತಾಯಿ. ನನಗೆ ಚಾಸ 4 ರಿಂದ ಚಾಸ 10 ರವರ ಪರಿಚಯವಿರುತ್ತದೆ. ಈಗ ಸುಮಾರು 3 ವರ್ಷದ ಹಿಂದೆ ಬೆಳಿಗ್ಗೆ 9 ಗಂಟೆಯಲ್ಲಿ ನಾನು, ಚಾಸ 2 ಮತ್ತು 3 ರವರು ನಮ್ಮ ನಿವೇಶನದಲ್ಲಿ ಮನೆಯನ್ನು ಕಟ್ಟಿಸುತ್ತಿದ್ದಾಗ ನ್ಯಾಯಾಲಯದ ಮುಂದಿರುವ ಆರೋಪಿತರು ಸದರಿ ಸ್ಥಳಕ್ಕೆ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ನಾವು ಏಕೆ ಬೈಯುತ್ತಿದ್ದೀರಿ ನಿವೇಶನ ನಮಗೆ ಸೇರಿರುತ್ತದೆ ಎಂದು ಹೇಳಿದ್ದು, ಆಗ 2 ನೇ ಆರೋಪಿಯು ನನ್ನ ತಲೆಯನ್ನು ಹಿಡಿದು ಎಳೆದಾಡಿ ನಾನು ಧರಿಸಿದ್ದ ನೈಟಿಯನ್ನು ಹರಿದು ಹಾಕಿ ನನ್ನನ್ನು ಕೆಳಗೆ ಬೀಳಿಸಿರುತ್ತಾರೆ. ಆಗ 2 ನೇಆರೋಪಿಯು ನನ್ನನ್ನು ಕಾಲಿನಿಂದ ತುಳಿದಿರುತ್ತಾರೆ. ನಂತರ ನನ್ನ ಯಜಮಾನರು ಗಲಾಟೆ ಬಿಡಿಸಲು ಬಂದಾಗ 3 ನೇ ಆರೋಪಿಯು ದೊಣ್ಣೆಯಿಂದ ಮೈಕೈಗೆ ಹೊಡೆದು ಹಲ್ಲೆ ಮಾಡಿರುತ್ತಾರೆ. ನಂತರ ನನ್ನ ತಾಯಿ ಚಾಸ 3 ರವರು ಜಗಳ ಬಿಡಿಸಲು ಬಂದಾಗ ನನ್ನ ತಾಯಿಯನ್ನು 5 ನೇ ಆರೋಪಿಯ ಕೆಳಗೆ ಕೆಡವಿರುತ್ತಾರೆ. ಆಗ 4 ಮತ್ತು 5 ನೇ ಆರೋಪಿತರು ನನ್ನ ತಾಯಿಯನ್ನು ಕಾಲಿನಿಂದ ತುಳಿದಿರುತ್ತಾರೆ. ಆಗ 6 ನೇ ಆರೋಪಿಯು ನನ್ನನ್ನು ಮಾನಭಂಗ ಮಾಡಿ ಸಾಯಿಸಲು ಹೇಳಿರುತ್ತಾನೆ. ನಂತರ 6 ನೇ ಆರೋಪಿಯು ಬಿಡಬೇಡಿ ಕೊಲೆ ಮಾಡಿ ಎಂದು ಉಳಿದ ಆರೋಪಿತರಿಗೆ ಕುಮ್ಮಕ್ಕು ನೀಡಿರುತ್ತಾರೆ. ನಂತರ ಚಾಸ 5 ಮತ್ತು 8 ರವರು ಗಲಾಟೆಯನ್ನು

ಬಿಡಿಸಿರುತ್ತಾರೆ. ನಂತರ ಚಾಸ 2 ರವರು ನನ್ನನ್ನು ಸರಗೂರಿನ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಗಲಾಟೆಯ ವಿಚಾರವನ್ನು ಗ್ರಾಮದಲ್ಲಿ ತಿಳಿಸಿದ್ದು ಅವರು ಪಂಚಾಯಿತಿ ಮಾಡುತ್ತೇನೆ ಎಂದು ಹೇಳಿದ್ದು ಆದರೆ ಆರೋಪಿತರು ಪಂಚಾಯಿತಿಗೆ ಬಂದಿರುವುದಿಲ್ಲ. ನಂತರ ಗಲಾಟೆಯಾದ 2 ದಿನಗಳ ನಂತರ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನನಗೆ ಅನಾರೋಗ್ಯವಿದ್ದರಿಂದ ದೂರು ನೀಡಲು ತಡವಾಗಿರುತ್ತದೆ. ಸಾಕ್ಷಿದಾರರು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ದೂರು ನೀಡಿದ ಎರಡು ದಿನಗಳ ನಂತರ ಸರಗೂರು ಪೋಲಿಸರು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ನಾನು ತೋರಿಸಿದ ಘಟನಾ ಸ್ಥಳವನ್ನು ಚಾಸ 8 ಹಾಗೂ ಇನ್ನೊಬ್ಬ ಪಂಚರ ಸಮಕ್ಷಮ ಬೆಳಿಗ್ಗೆ 11 ಗಂಟೆಯಲ್ಲಿ ಪಂಚನಾಮೆ ಮಾಡಿರುತ್ತಾರೆ. ಪೋಲಿಸರು ಮಹಜರಿನ ಸಮಯದಲ್ಲಿ ದೊಣ್ಣೆ ಮತ್ತು ನೈಟಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿದಾರರು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಗಲಾಟೆಯಾದ 1 ತಿಂಗಳ ನಂತರ ನಾನು ನ್ಯಾಯಾಧೀಶರ ಮುಂದೆ ಹಾಜರಾಗಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಮ್ಯಾಜಿಸ್ಟ್ರೇಟ್ ರವರ ಮುಂದೆ ನೀಡಿದ ನನ್ನ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ನ್ಯಾಯಾಲಯದ ಶಿರಸ್ತೆದಾರರು ಸೀಲ್ ಮಾಡಿರುವ ಸಾಕ್ಷಿಯ ಕಲಂ 164 ಹೇಳಿಕೆಯನ್ನು ಹಾಜರುಪಡಿಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಸಾಕ್ಷಿಯು ಸದರಿ ಹೇಳಿಕೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ3 ಎಂದು, ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ದೊಣ್ಣೆ ಮತ್ತು ನೈಟಿಯನ್ನು ಸದರಿ ದಿನ ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅವುಗಳನ್ನು ಎಂಓ 1 ಮತ್ತು ಎಂಓ 2 ಎಂದು ಗುರುತಿಸಲಾಯಿತು. ಎಂಓ 2 ನೈಟಿಯನ್ನು ಸೀಲ್ ಮಾಡಿದ ಕವರ್ ಮೇಲಿರುವ ಸಾಕ್ಷಿಯ ಸಹಿಯನ್ನು ಎಂಓ 2 ಎ ಎಂದು ಗುರುತಿಸಲಾಯಿತು. ಘಟನೆಯ ವಿಚಾರವಾಗಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಹಾಗೂ ಗೈರುಹಾಜರಾಗಿರುವ ಉಳಿದ ಆರೋಪಿತರು ಸದರಿ ಕೃತ್ಯವನ್ನು ಎಸಗಿರುತ್ತಾರೆ. ಗೈರು ಹಾಜರಾಗಿರುವ ಆರೋಪಿತರನ್ನು ನೋಡಿ ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ ಜಿ..ಆರ್.ಎಸ್ ವಕೀಲರಿಂದಃ**

ನಾನು 7 ನೇ ತರಗತಿ ಓದಿರುತ್ತೇನೆ. ನನಗೆ ಓದಲು ಬರುವುದಿಲ್ಲ, ಆದರೆ ಬರೆಯಲು ಬರುತ್ತದೆ. ದೂರಿನಲ್ಲಿರುವ ವಿಚಾರಗಳು ನನಗೆ ಗೊತ್ತಿರುತ್ತದೆ. ಅದನ್ನು ಸರಗೂರು ಪೋಲಿಸರು ಬರೆದಿರುತ್ತಾರೆ. ನನ್ನನ್ನು ನಂಜನಗೂಡಿಗೆ ಮದುವೆ ಮಾಡಿಕೊಡಲಾಗಿರುತ್ತದೆ. ನನ್ನ ತಮ್ಮ ಚಂದ್ರ ಪತ್ರಿಕಾ ವರದಿಗಾರರು

ಎಂದರೆ ಸರಿ. ನನ್ನ ಇನ್ನೊಬ್ಬ ತಮ್ಮ ಹಾದನೂರು ಸಿದ್ದು ಎಂಬುವವರು ವಿಜಯವಾಣಿಯ ಪತ್ರಕರ್ತರು ಎಂದರೆ ಸರಿ. ಆರೋಪಿತರು ದಿನಾಂಕ 5.11.2022 ರಂದು ನನ್ನ, ನನ್ನ ಸಹೋದರರ ಮೇಲೆ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿ. ಗಲಾಟೆ ನಡೆದಿದೆ ಎಂದು ಹೇಳುವ ಪೂರ್ವದಲ್ಲಿ 1 ನೇ ಆರೋಪಿಯು ನಮ್ಮ ವಿರುದ್ದ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್ 406/2022 ರಂತೆ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಅವರ ಪರವಾಗಿ ನಿರ್ಬಂಧಕಾಜ್ಞೆ ಆದೇಶವಾಗಿತ್ತು ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳುವ ನಿವೇಶನ 1 ನೇ ಆರೋಪಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸದರಿ ನಿವೇಶನದ ಅಸೆಸ್‌ಮೆಂಟ್ 1 ನೇ ಆರೋಪಿಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಮಗೆ ಬರೆದುಕೊಟ್ಟಿರುತ್ತಾರೆ ಎನ್ನುವರು. ನಾನು ಆಸ್ಪತ್ರೆಗೆ ಹೋದ ದಿನವೇ ಪೋಲಿಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಾನು ಯಾವುದೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವುದಿಲ್ಲ, ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ದೂರು ನೀಡಿದ ಎರಡು ದಿನಗಳ ನಂತರ ನನ್ನ ಸಹೋದರರು ಪ್ರಭಾವ ಬೀರಿ ಆರೋಪಿತರ ವಿರುದ್ದ ಸುಳ್ಳು ಕೇಸನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆ ನಡೆದಿದೆ ಎಂದು ಹೇಳುವ ಸಮಯದಲ್ಲಿ ಯಾರು ಸೇರಿದ್ದರು ಎಂದು ನಾನು ನೋಡಿರುವುದಿಲ್ಲ. ನಾವೇ ಆರೋಪಿತರ ಮೇಲೆ ಜಗಳ ಮಾಡಿದ್ದು ಅವರು ನಮ್ಮ ವಿರುದ್ದ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಸಹೋದರರ ವಿರುದ್ದ ಸಿ.ಸಿ ನಂ.49/2023 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಆಸ್ತಿಯು 1 ನೇ ಆರೋಪಿಗೆ ಹೋಗಬಾರದೆಂಬ ಉದ್ದೇಶದಿಂದ ಪೋಲಿಸರ ಜೊತೆ ಶಾಮೀಲಾಗಿ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಎಂಓ 1 ಮತ್ತು ಎಂಓ 2 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ಠಾಣೆಯಲ್ಲಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಂಓ 1 ದೊಣ್ಣೆಯ ಮೇಲೆ ಚೀಟಿ ಅಂಟಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಎಂಓ 1 ರ ಮೇಲೆ ನನ್ನ ಸಹಿ ಇರುವುದಿಲ್ಲ. ಘಟನೆ ನಡೆದಿದೆ ಎಂದು ಹೇಳುವ ಸ್ಥಳದ ಚಕ್ಕುಬಂದಿಯನ್ನು ಹೇಳಲು ಸಾಧ್ಯವಿಲ್ಲ. ಪಂಚಾಯಿತಿ ಮಾಡಲು ಯಾರು ಸೇರಿದ್ದರು ಎಂದರೆ ಸಾಕ್ಷಿದಾರರು ನನ್ನ ತಾಯಿ ಹೋಗಿದ್ದು ನನಗೆ ಗೊತ್ತಿರುವುದಿಲ್ಲ ಎನ್ನುವರು. ಮಹಜರಿನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಆರೋಪಿತರು ನಮ್ಮ ವಿರುದ್ದ ನೀಡಿರುವ ದೂರಿಗೆ ಪ್ರತಿಯಾಗಿ 2 ದಿನ ತಡವಾಗಿ ಈ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ